**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ</u>**

ಸಿ.ಸಿ.ನಂಬರ್ : 2427/2022

ಪಿ.ಡಬ್ಲ್ಯೂ : 1 ಸಿ.ಡಬ್ಲ್ಯೂ 1

| | |
|---|---|
| ಸಾಕ್ಷಿದಾರರ ಹೆಸರು | : ವಿಜಯಕುಮಾರ ಹಿರೇಮಠ |
| ತಂದೆಯ ಹೆಸರು | : ಗುರಯ್ಯ |
| ವಯಸ್ಸು | : 36 ವರ್ಷ |
| ಉದ್ಯೋಗ | : ಅಬಕಾರಿ ನೀರಿಕ್ಷಕರು |
| ವಾಸಸ್ಥಳ | : ಶಹಾಪೂರ |
| ಸಮಯ | : 12.40 |

<u>ಸಾಕ್ಷಿಗೆ ಇಂದು ದಿನಾಂಕಃ 26.09.2025 ರಂದು ಪ್ರಮಾಣೀಕರಿಸಲಾಯಿತು.</u>

**<u>ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ</u>**

ನಾನು ಅಕ್ಟೋಬರ 2016 ರಂದು ನವೆಂಬರ್ 2020 ರವರೆಗೆ ನಾನು ಸಿಂದಗಿ ಅಬಕಾರಿ ಕಛೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ 27-04-20 ರಂದು ಬೆಳಿಗ್ಗೆ 5.30 ಗಂಟೆಗೆ ಸುಮಾರಿಗೆ ನಾನು ಚಾ ಸಾ 4,5 ರವರೊಂದಿಗೆ ಚಿಕ್ಕರೂಗಿ - ಹಿಟ್ನಳ್ಳಿ ರಸ್ತೆಯ ಮಾರ್ಗವಾಗಿ ರಸ್ತೆ ಗಾವಲು ನಿರ್ವಹಿಸುತ್ತಿದ್ದಾಗ ವಿಜಯಪುರ ತಾಲೂಕಿನ ಭೂತನಾಳ ತಾಂಡಾದಿಂದ ರಾಜಣ್ಣ ನಿಂಗಪ್ಪ ಹೊರ್ತಿ ಅಕ್ರಮವಾಗಿ ಕಳ್ಳ ಭಟ್ಟಿ ಸಾರಾಯಿ ತುಂಬಿದ ಪ್ಲಾಸ್ಟಿಕ್ ಬಾಟಲಿಗಳನ್ನು ಒಂದು ನೈಲಾನ ಚೀಲದಲ್ಲಿ ಹಾಕಿಕೊಂಡು ತನ್ನ ದ್ವಿ ಚಕ್ರ ವಾಹನ ನಂಬರ

ಕೆಎ/28/ಡಿಡಬೂ /4806 ರ ಮೇಲೆ ಹ್ಯಾಂಡಲಗೆ ಹಾಕಿಕೊಂಡು ಎಚ್ ಎಪ್ ಡಿಲಕ್ಷ ವಾಹನದಲ್ಲಿ ತೆಗೆದುಕೊಂಡು ಚಿಕ್ಕರೂಗಿಗೆ ಬರುತ್ತಿದ್ದು ತಾವುಗಳು ಚಿಕ್ಕರೂಗಿ ರಸ್ತೆಯ ಕೆನಾಲ್ ಬ್ರೀಡ್ಜ ಹತ್ತಿರ ತಾವುಗಳ ಹೋದಲ್ಲಿ ಹಿಡಿಯಬದು ಎಂದು ಬಾತ್ಮಿ ಬಂದಿದ್ದು, ಸದರಿ ವಿಷಯವನ್ನು ನಾನು ಸಿಬ್ಬಂದಿಗಳಿಗೆ ತಿಳಿಸಿ ಬೆಳಿಗ್ಗೆ 6 ಗಂಟೆ ಸುಮಾರಿಗೆ ಚಿಕ್ಕರೂಗಿ ಹಿಟ್ನಳ್ಳಿ ರಸ್ತೆ ಹತ್ತಿರ ನಿಂತ ಚಾ ಸಾ 2 ಮತ್ತು 3 ರವರಿಗೆ ಬಾತ್ಮಿ ವಿಷಯ ತಿಳಿಸಿ ದಾಳಿ ಮಾಡದಲ್ಲಿ ತಾವು ಪಂಚರಾಗುವಂತೆ ಕೇಳಿಕೊಂಡಿದ್ದು ಅದರಂತೆ ಸದರಿಯವರು ಒಪ್ಪಿಕೊಂಡಿರುತ್ತಾರೆ.

ನ್ಯಾಯಾಲಯದಿಂದ ಸರ್ಚ ವಾರಂಟ್ ಅನುಮತಿ ಪಡೆಯಲು ಕಾಲಾವಕಾಶ ಇಲ್ಲದೇ ಇರುವ ಕಾರಣ ಸ್ದಳದಲ್ಲಿಯೇ ಕಲಂ 54 ಅಬಕಾರಿ ಕಾಯ್ದೆ ಅಡಿಯಲ್ಲಿ ಶೋಧನಾ ಸಮುಚ್ಚಿತ ವರದಿ ತಯಾರಿಸಿ, ನಂತರ ನಾನು ಸಿಬ್ಬಂದಿಗಳು ಹಾಗೂ ಪಂಚರೊಂದಿಗೆ ಕಛೇರಿ ವಾಹನ ನಂಬರ ಕೆಎ/28/ ಜಿ/0659 ರಲ್ಲಿ ಮಾಹಿತಿ ಬಂದ ಸ್ದಳಕ್ಕೆ ಹೋಗಿರುತ್ತೇವೆ. ಬೆಳಿಗ್ಗೆ 7.30 ಗಂಟೆ ಸುಮಾರಿಗೆ ನಾವು ಸ್ದಳದಲ್ಲಿ ನಿಂತು ಗಮನಿಸಲಾಗಿ ಒಬ್ಬ ವ್ಯಕ್ತಿ ದ್ವಿ ಚಕ್ರ ವಾಹನದ ಹಿಟ್ನಳ್ಳಿ ರಸ್ತೆ ಮಾರ್ಗವಾಗಿ ಬರುತ್ತಿದ್ದು ಆತನಿಗೆ ನಿಲ್ಲಿಸುವಂತೆ ಕೈ ಸನ್ನೆ ಮಾಡಿದ್ದು ಆತ ವಾಹನದ ವೇಗವನ್ನು ಕಡಿಮೆ ಮಾಡಿ ವಾಹನ ಅಲ್ಲೆ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದ್ದು ಆತನನ್ನು ಹಿಡಿದು ವಿಚಾರಿಸಲಾಗಿ ತನ್ನ ಹೆಸರು ರಾಜಣ್ಣ ತಂದೆ ನಿಂಗಪ್ಪ ಹೊರ್ತಿ ಎಂದು ತಿಳಿಸಿದ್ದು ನಂತರ ನಾವು ಸದರಿ ದ್ವಿ ಚಕ್ರ ವಾಹನದ ಹತ್ತಿರ ಹೋಗಿ ಪರಿಶೀಲಿಸಲಾಗಿ ನೈಲಾನ ಚೀಲದಲ್ಲಿ 2 ಲೀಟರ್ ಸಾಮರ್ಥ್ಯ ಉಳ್ಳ 5 ಪ್ಲಾಸ್ಟಿಕ್ ಬಾಟಲಿಗಳು ಇದ್ದವು. ಅವುಗಳ ಮುಚ್ಚಳ ತೆಗೆದು ಪರಿಶೀಲನೆ ಮಾಡಲಾಗಿ ಹುಳುಚಾದ ಮತ್ತು ಗಡುಸಾದ ವಾಸನ ಕುಡಿದ ಬಿಳಿ ದ್ರವ್ಯ ಇದ್ದು ಅದು ಕಳ್ಳ ಭಟ್ಟಿ ಇರುತ್ತದೆ ಎಂದು ಮನವರಿಕೆ ಮಾಡಿ ಸದರಿ ವಿಷಯ ಪಂಚರಿಗೆ ತಿಳಿಸಲಾಯಿತು. ಒಟ್ಟು 10 ಲೀಟರ್ ಕಳ್ಳ ಭಟ್ಟಿ ಸಾರಾಯಿ ದೊರಕಿರುತ್ತದೆ.

ವಾಹನವನ್ನು ಪರಿಶೀಲಿಸಲಾಗಿ ಅದು ಹಿರೋ ಕಂಪನಿಯ ಕಪ್ಪು ಬಣ್ಣದ ದ್ವಿ ಚಕ್ರ ವಾಹನ ಇದು ಅದರ ನೊಂದಣಿ ನಂಬರ ಕೆಎ/28/ಇಡಬ್ಲೂ 4806 ಅಂತಾ ಇತ್ತು. ಕಳ್ಳಭಟ್ಟಿಯ ಕುರಿತು ವ್ಯಕ್ತಿಯನ್ನು ವಿಚಾರಿಸಲಾಗಿ ಆತ ಕೋವಿಡ್ –19 ರ ಹಿನ್ನಲೆಯಲ್ಲಿ ಮಧ್ಯ ಮಾರಾಟ ನಿಷೇಧ ಇದ್ದ ಕಾರಣ ಕಳ್ಳಭಟ್ಟಿ ಸಂಗ್ರಹಿಸಿ ವಿವಿಧ ಕಡೆಯಿಂದ ತಂದು ಮಾರಾಟ ಮಾಡುರುತ್ತೇನೆ ಎಂದು ತಿಳಿಸಿರುತ್ತಾನೆ.

ನಂತರ ಸದರಿ ಮು ಮಾ ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಜಪ್ತಿ ಮಾಡಿಕೊಂಡ ಮು ಮಾಲು ಪೈಕಿ 2 ಲೀಟರ ಕಳ್ಳ ಭಟ್ಟಿ ಸಾರಾಯಿ ಮಾದರಿ ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಕಟ್ಟಿ ಅರಗಿನ ಶೀಲ್ ಹಾಕಲಾಯಿತು. ನಂತರ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಅಂಟಿಸಿಲಾಯಿತು. ಮಾದರಿ ನಮೂನೆ ತಯಾರಿಸಲಾಯಿತು. ಬೆಳಿಗ್ಗೆ 7.30 ರಿಂದ 9.00 ರವರೆಗೆ ಪಂಚರ ಸಮಕ್ಷಮ ಪಂಚನಾಮೆ ಬರೆದು ನಂತರ ಜಪ್ತಿ ಮಾಡಿಕೊಂಡ ಮು ಮಾಲು ಹಾಗೂ ಆರೋಪಿಯೊಂದಿಗೆ ಠಾಣೆಗೆ ಬಂದು ಪಿರ್ಯಾದಿ ನೀಡಿದ್ದು ಕಛೇರಿ ನಂಬರ 47/2019–20 ರಲ್ಲಿ ಪ್ರಕರಣದ ದಾಖಲು ಮಾಡಿರುತ್ತೇನೆ.

ಸಾಕ್ಷಿಗೆ ದಾಳಿ ಸಮಯದಲ್ಲಿ ತಾವು ತಯಾರಿಸಿದ ಶೋಧನಾ ಪತ್ರ ಪ್ರತಿ ತೋರಿಸಲಾಗಿ ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿ ನಿಪಿ 1 ಎ ಎಂದು ಗುರುತಿಸಲಾಯಿತು. ಜಪ್ತಿ ಪಂಚನಾಮೆ ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿ ನಿಪಿ 2 ಎ ಎಂದು ಗುರುತಿಸಲಾಯಿತು. ದೂರನ್ನು ನಿಪಿ 3 ಎಂದು, ಸಾಕ್ಷಿಯ ಸಹಿ ನಿಪಿ 3 ಎ ಎಂದು ಗುರುತಿಸಲಾಯಿತು. ಪ್ರ.ವ.ವರದಿ ನಿಪಿ 4 ಎಂದು, ಸಾಕ್ಷಿಯ ಸಹಿ ನಿಪಿ 4 ಎ ಎಂದು ಗುರುತಿಸಲಾಯಿತು.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಆತ ಸಧ್ಯ ಗೈರು ಹಾಜರಿದ್ದು ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆ ಕುರಿತು ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಪಂಚನಾಮೆ ಕಾಲಕ್ಕೆ ಜಪ್ತಿ ಮಾಡಿಕೊಂಡ ದ್ವಿ ಚಕ್ರ ವಾಹನವನ್ನು ನಾನು ನೋಡಿದಲ್ಲಿ ಗುರುತಿಸುತ್ತೇನೆ.

**ಸಧ್ಯ ಮು ಮಾಲುಗಳು ಸಿಗದ ಕಾರಣ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.